

ಹೇಳುತ್ತಾ ಲಯಕ್ಕೆ ತಕ್ಕಂತೆ ನೃತ್ಯ ಮಾಡುವುದು ಅವರ ವಿಶಿಷ್ಟ ನಂಬಿಕೆ.

ಭಾರತದ ಅರಣ್ಯಗಳಲ್ಲಿ ಮುಖ್ಯ ಫಸಲಾಗಿಯೂ ಪರಿಗಣಿಸಲಾಗಿರುವ ಹೊನ್ನಂಬರಿ ಆರೇಳು ಅಡಿ ಎತ್ತರ ಬೆಳೆದು ರೆಂಬೆಗಳು ನೆಲಕ್ಕೆ ಹತ್ತಿಕೊಂಡಂತೆಯೇ ಬೆಳೆಯುತ್ತವೆ. ಚರ್ಮ ಹದಮಾಡಲು ಈ ಗಿಡದ ತೊಗಟೆ ಉತ್ತಮ ಕಚ್ಚಾ ವಸ್ತುವಾದ್ದರಿಂದ ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ಇದರ ತೊಗಟೆಯಿಂದ ಹದಮಾಡಿದ ಕಂದುಬಣ್ಣದ ಬಿರುಸಾದ ಹೊದಿಕೆಯ ಚರ್ಮ ತಯಾರಿಸುತ್ತಾರೆ. ಬೆಂಗಳೂರು ಹಾಗೂ ಚೆನ್ನೈಗಳಲ್ಲಿ ಈ ಗಿಡದ ಚಕ್ಕೆಯನ್ನು ಈಗಲೂ ಈ ವಿಧಾನಕ್ಕೆ ಉಪಯೋಗಿಸುತ್ತಾರೆ. ಮೊದಲ ಮಹಾಯುದ್ಧದ ನಂತರ ಬಳಕೆಗೆ ಬಂದ ಜಾಲಿ ಜಾತಿಯ 'ಅಕೇಶಿಯಾ ಮಲನೊಕ್ಸೈಲಾನ್' ಎಂಬ ಗಿಡದಿಂದ ಈ ಗಿಡಕ್ಕೆ ಪ್ರಾಶಸ್ತ್ಯ ಕಡಿಮೆಯಾಯಿತು ಎಂದು ಹೇಳಲಾಗುತ್ತದೆ.

ದನಗಳು ಮತ್ತು ಆಡುಗಳು ಇದರ ಸೊಪ್ಪನ್ನು ತಿನ್ನುವುದಿಲ್ಲವಾದ್ದರಿಂದ ಈ ಗಿಡಗಳಿಗೆ ಅವುಗಳಿಂದ ನಷ್ಟ ಉಂಟಾಗುವ ಭಯವಿಲ್ಲ. ಗಿಡಕ್ಕೆ ಎರಡು ಮೂರು ವರ್ಷವಾದಾಗ ರೆಂಬೆಗಳ ಬುಡ ಬಿಟ್ಟು ಮೇಲ್ಭಾಗ ಕತ್ತರಿಸಿ ತೊಗಟೆಗಳನ್ನಷ್ಟೇ ಸಂಗ್ರಹಿಸುವುದು ಒಂದು ಉದ್ಯಮ. ರೆಂಬೆಗಳನ್ನು ಕತ್ತರಿಸಿದ ನಂತರವೂ ಕವಲುಗಳು ಗಿಡದ ಇತರೆ ಭಾಗಗಳಿಂದ ಹೊರಟು ವಿಪುಲವಾಗಿ ಬೆಳೆಯುತ್ತವೆ. ಪ್ರತಿ ವರ್ಷವೂ ಈ ರೀತಿ ರೆಂಬೆಗಳನ್ನು ಕತ್ತರಿಸಿ ತೊಗಟೆಗಳನ್ನು ಸಂಗ್ರಹಿಸುತ್ತಾರಾದರೂ, ಇತ್ತೀಚೆಗೆ ಕೃಷಿ ಉತ್ಪನ್ನವಾಗಿ ಹೊನ್ನಂಬರಿ ಬೆಳೆಯುವುದು ಕಡಿಮೆಯಾಗಿದೆ.

ತಮಿಳುನಾಡಿನಲ್ಲಿ ವರ್ಷಕ್ಕೆ ಹತ್ತರಿಂದ ಹನ್ನೊಂದು ಸಾವಿರ ಟನ್ ಹೊನ್ನಂಬರಿ ತೊಗಟೆ ಈಗಲೂ ಸಂಗ್ರಹವಾದರೆ, ಮೈಸೂರು–ಆಂಧ್ರ ಪ್ರಾಂತ್ಯಗಳಲ್ಲಿನ ವಾರ್ಷಿಕ ಉತ್ಪನ್ನ ಎಂಟರಿಂದ ಹತ್ತು ಸಾವಿರ ಟನ್ ಎಂಬ ಅಂದಾಜಿದೆ. ತಮಿಳುನಾಡು ಸರ್ಕಾರ ನೀಲಗಿರಿ ಜಿಲ್ಲೆಯಲ್ಲಿ ಹೊನ್ನಂಬರಿ ತೋಪನ್ನು ಬೆಳೆಸುತ್ತಿದೆ. ಇದರ ತೊಗಟೆಯಲ್ಲಿರುವ 'ಟ್ಯಾನಿನ್' ಎಂಬ ಅಂಶ ಹಸಿ ಚರ್ಮದೊಳಗಡೆ ವಿಶಾಲವಾಗಿ ಒಂದೇ ಸಮವಾಗಿ ಹರಡುತ್ತದೆ. ಇದರಿಂದ ಹಿಗ್ಗಿಸಲಾಗುವ, ಬಾಳಿಕೆ ಬರುವ ಹದ ಮಾಡಿದ ಚರ್ಮ ಬಳಕೆಗೆ ಸಿದ್ಧವಾಗುತ್ತದೆ.

ಕೆಲವು ಔಷಧೀಯ ಗುಣಗಳನ್ನು ಹೊಂದಿರುವ ಹೊನ್ನಂಬರಿ ಬಳಕೆಯಿಂದ ಗರ್ಭಿಣಿಯರು ಹಾಗೂ ಬಾಣಂತಿಯರು ದೂರ ಇರಬೇಕು ಎನ್ನುತ್ತಾರೆ ನಾಟಿ ವೈದ್ಯರು. ಇದರ ಎಲೆ ಮತ್ತು ಕಾಯಿಗಳಿಗೆ ಕರುಳಿನಲ್ಲಿರುವ ಜಂತುಗಳನ್ನು ನಾಶಮಾಡುವ ಶಕ್ತಿ ಇದ್ದು, ಚರ್ಮರೋಗಕ್ಕೆ ಔಷಧಿಯಾಗಿ ಉಪಯೋಗಕ್ಕೆ ಬರುವುದುಂಟು. ಅಡಿಕೆ ಸಿಗದಿದ್ದಾಗ ಇದರ ತೊಗಟೆಯ ಚೂರನ್ನು ವೀಳ್ಯದೆಲೆ ಜೊತೆ ಅಗಿಯಲು ಉಪಯೋಗಿಸುತ್ತಿದ್ದೆವು ಎಂಬುದು ವೃದ್ಧ ಕುರಿಗಾಹಿಗಳ ಅನುಭವದ ನುಡಿ.

ಕರ್ನಾಟಕದ ಕೆಲವು ಭಾಗಗಳಲ್ಲಿ ಬಾಲಕಿಯರು ಋತುಮತಿಯಾದಾಗ ಇದೇ ಗಿಡವನ್ನು ಮೊದಲು ಪೂಜಿಸಬೇಕು. ಇದು ಫಲವಂತಿಕೆಯ ಸಂಕೇತ ಎಂಬ ನಂಬಿಕೆ ಬಹು ಪುರಾತನವಾದುದು. ಈ ಆಚರಣೆಗಾಗಿ ಬೇರು ಸಮೇತ ಹೊನ್ನಂಬರಿಯ ಗಿಡವನ್ನು ಕಿತ್ತು ತಂದು ಮನೆಯ ಸಮೀಪ ನೀರು ಹಾಕಿ ಒಣಗದಂತೆ ಗಮನವಿಟ್ಟು ಬೆಳೆಸುವುದುಂಟು. ಎಲ್ಲೆಂದರಲ್ಲಿ ದಟ್ಟವಾಗಿ ಕಾಣಿಸುವ ಈ ಹೊನ್ನಂಬರಿ ಇಂತಹ ಅಂಶಗಳ ಮೂಲಕ ಹೊನ್ನ ಗುಣದ್ದು ಎಂದರೆ ಖಂಡಿತ ಅತಿಶಯೋಕ್ತಿಯಲ್ಲ.

ಪ್ರತಿಕ್ರಿಯೆ: **feedback@sudha.co.in**

